ನನ್ನ ಓದು

# ಜೀವಕಾರುಣ್ಯದ ಕಥೆಗಳು



**ಅನುಸೂಯ ಯತೀಶ್**

ಸಂಶೋಧಕ, ವಿಮರ್ಶಕ ರವಿಕುಮಾರ್ ನೀಹ ಅವರು ತಮ್ಮ ಸಂವೇದನೆಗಳನ್ನು ಸೃಜನಶೀಲವಾಗಿ ವ್ಯಕ್ತಪಡಿಸಲು ಇದೀಗ ಕಥಾಪ್ರಕಾರಕ್ಕೆ ಹೊರಳಿದ್ದಾರೆ. ತಮ್ಮನ್ನು , ತಮ್ಮ ಸುತ್ತಲಿನ ಲೋಕವನ್ನು ವಿಮರ್ಶಾ ದೃಷ್ಟಿಯಿಂದ ನೋಡುತ್ತಲೇ ಅವರೊಳಗಿದ್ದ ಕಥೆಗಾರ 'ಅವು ಅಂಗೇ' ಕಥಾಸಂಕಲನದ ಮೂಲಕ ಪ್ರಕಟವಾಗಿದ್ದಾನೆ.

ದಲಿತ ಸಂವೇದನೆಗಳನ್ನು ಯಥೇಚ್ಛವಾಗಿ ಅಷ್ಟೇ ಸಶಕ್ತವಾಗಿ ಗರ್ಭೀಕರಿಸಿಕೊಂಡು ಇಲ್ಲಿನ ಹತ್ತು ಕಥೆಗಳು ರಚಿತವಾಗಿವೆ. ಇವರ ಎದೆಯಲ್ಲಿ ಮಡುಗಟ್ಟಿದ ಶೋಷಣೆ, ಅಸಮಾನತೆಯ ನೋವುಗಳನ್ನು ವಿಶಾಲವಾದ ಕ್ಯಾನ್ವಾಸ್‌ನಲ್ಲಿ ವ್ಯಕ್ತಪಡಿಸಲು ಕಥಾಪ್ರಕಾರ ಇವರನ್ನು ತನ್ನ ತೆಕ್ಕೆಗೆ ಆತುಕೊಂಡಂತಿದೆ. ನೊಂದ ಸಮುದಾಯದ ಸೂಕ್ಷ್ಮ ಸಂವೇದನೆಗಳ ದೇಶಿ ಮೂಲದ ಅಪ್ಪಟ ಮಣ್ಣಿನ ಕಥೆಗಳು ಇವಾಗಿವೆ. ದಮನಿತರ ಕಣ್ಣೀರಿಗೆ ಕರವಸ್ತ್ರವಾಗಿ ಅವರ ಸಮಸ್ಯೆಗಳ ಮೂಲ ಕಾರಣವನ್ನು ಮನವರಿಕೆ ಮಾಡಿಸುತ್ತಲೇ, ಸಮಾಜಕ್ಕೆ ಅಂತಃಕರಣದ, ಸಾಮಾಜಿಕ ಕಾಳಜಿಯ, ತುರ್ತಿನ ಪಾಠವನ್ನು ಈ ಕಥೆಗಳು ಮಾಡುತ್ತವೆ. ಇವೆಲ್ಲ ನೈಜ ಘಟನೆಗಳಾಗಿದ್ದರೂ, ಸಾಹಿತ್ಯಿಕ ದೃಷ್ಟಿಯಿಂದ ಲೇಖಕರು ತಮ್ಮ ಸ್ವಾತಂತ್ರ್ಯವನ್ನು ಬಳಸಿಕೊಂಡು ಸಮಷ್ಟಿಪ್ರಜ್ಞೆ ಮೆರೆದಿರುವುದರಿಂದ ಈ ಕೃತಿಗೆ ಹೆಚ್ಚು ಮಹತ್ವ ಬರುತ್ತದೆ. ಕಲ್ಪಿಸಿ ಬರೆಯುವುದಕ್ಕೂ ಅನುಭವಿಸಿದ್ದನ್ನು ಅಕ್ಷರ ರೂಪದಲ್ಲಿ ಅಭಿವ್ಯಕ್ತಿಸುವುದಕ್ಕೂ ಸಾಕಷ್ಟು ವ್ಯತ್ಯಾಸವಿದೆ. ಹಸಿದವನ ದೃಷ್ಟಿಯಲ್ಲಿ ಕಾಣುವ ಹಸಿವು, ಒಡಲು ತುಂಬಿದವನ ನೋಟಕ್ಕೆ ದಕ್ಕಲು ಸಾಧ್ಯವೇ? ಹಾಗಾಗಿ ಈ ಅನುಭವ ಜನ್ಯ ಕಥನಗಳಲ್ಲಿ ತೀವ್ರತೆ ಗಾಢವಾಗಿದೆ.

ನೀಹ ಅವರು ತಮ್ಮ ಕಥೆಗಳಿಗೆ ಆಧುನಿಕ ಮೃದು ಸ್ಪರ್ಶದ ಗ್ರಾಂಥಿಕ ಭಾಷಾರೂಪ ನೀಡದೇ, ಹಟ್ಟಿಯ-ಕೇರಿಯ ಜನಗಳ ದೈನಿಕ ನೆಲಮೂಲದ ಭಾಷೆಯಲ್ಲಿ, ತುಮಕೂರಿನ ಸುತ್ತಮುತ್ತಲಿನ ಗ್ರಾಮೀಣ ನುಡಿ ಸೊಗಡನ್ನು ಸೇರಿಸಿ ಗ್ರಾಮ್ಯ ಕಥನಗಳನ್ನು ರಚಿಸಿದ್ದಾರೆ. ನೀಹ ಅವರಿರುವ